(ಅ) ಹಾಗಿದ್ದಲ್ಲಿ, ಎಷ್ಟು ದಿನಗಳಲ್ಲಿ ಈ ಕೆಲಸವನ್ನು ಮಾಡಲಾಗುತ್ತದೆ ?

ಶ್ರಿ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

(ಅ) ಹೌದು

(ಆ) ಈ ಯೋಜನೆಯು ಪರಿಶೀಲನೆಯಲ್ಲಿದೆ.

ಜಲಾಶಯವನ್ನು ಕಟ್ಟಿದಂತಹ ಕಾಲದಲ್ಲಿ ೫೮೫೦ ಎಕರೆಗೆ ನೀರನ್ನು ಒದಗಿಸುವ ಉದ್ದೇಶ ಇತ್ತು. ಇವತ್ತು ೪೮೫೦ ಎಕರೆ ಜಮೀನಿಗೆ ಆರೆ ನೀರಾವರಿ ವ್ಯವಸ್ಥೆ ಇತ್ತು, ಒಂದು ಸಾವಿರ ಎಕರೆಯಲ್ಲಿ ಕಾರಿಫೆ ಪ್ಯಾಡಿ ಬೆಳೆಯತಕ್ಕಂತಹ ವ್ಯವಸ್ಥೆ ಇದೆ. ಈಗ ಆಲ್ಲಿ ೫೦ ಪರ್ಸೆಂಟ್ ಏರಿಯಾದಲ್ಲಿ ಕಬ್ಬು ಬೆಳೆಯನ್ನು ಬೆಳೆಯತಕ್ಕಂತಹ ಹವ್ಯಾಸವನ್ನು ಮಾಡಿಕೊಂಡು ಬಂದ ಕಾರಣ ನೀರು ಸಾಕಾಗುವುದಿಲ್ಲ, ಈಗ ಗಾಯತ್ರಿ ಜಲಾಶಯದಲ್ಲಿ ನಾಲ್ಕು ಆಡಿ ಎತ್ತರ ಮಾಡುವಂತೆ ೧೯೭೭-೭೯ರಲ್ಲಿ ೧೪೪ ಲಕ್ಷ ರೂಪಾಯಿಗಳ ಅಂದಾಜು ಮಾಡಲಾಗಿತ್ತು. ಆದರೆ ಈ ಅಂದಾಜನ್ನು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗಲಿಲ್ಲ, ಕಾರಣ ವೇದಾವತಿ ಜಲಾಶಯದಲ್ಲಿ ೪೨ ಟಿಎಂಸಿ ನೀರನ್ನು ಉಪಯೋಗಿಸುವುದಕ್ಕೆ ನಿರ್ಭಂದ ಇರುವುದರಿಂದ ೪೨ ಟಿಎಂಸಿ ನೀರನ್ನು ಈಗಾಗಲೇ ಉಪಯೋಗಿಸಿಕೊಂಡಿರುವುದರಿಂದ ಜಲಾಶಯವನ್ನು ಮತ್ತೆ ಬಡಾವಣೆ ಮಾಡುವುದಕ್ಕೆ ಸಾಧ್ಯವಿಲ್ಲ ಎನ್ನುವ ಅಭಿಪ್ರಾಯ ಇದೆ.

ಶ್ರೀ ಆರ್. ರಾಮಯ್ಯ. —ಮಾನ್ಯ ಸಚಿವರು ಸುಮಾರು ೫ ಸಾವಿರ ಎಕರೆಗೆ ನೀರನ್ನು ಕೊಡತಕ್ಕಂತಹ ವ್ಯವಸ್ಥೆ ಇದೆಯೆಂದು ಹೇಳಿದರು. ಗಾಯತ್ರಿ ಜಲಾಶಯ ರಾಷ್ಟ್ರೀಯ ಹೆದ್ದಾರಿಯಲ್ಲಿರುವುದರಿಂದಲೂ ೧೫ ಆಡಿ ನೀರು ಮಾತ್ರ ಉಪಯೋಗ ಮಾಡುವುದಕ್ಕೆ ಸಾಧ್ಯ ಇರುವುದರಿಂದಲೂ ಆದನ್ನು ಒಂದು ಫಸಲಿಗೆ ಮಾತ್ರ ನೀರು ಸಿಗುವುದರಿಂದಲೂ ೫ ಆಡಿ ಎತ್ತರ ಮಾಡಿ ಆ ಭಾಗದ ಜನರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳುತ್ತೇನೆ. ಈ ವಿಚಾರದಲ್ಲಿ ತಾಂತ್ರಿಕ ತಜ್ಞರ ಸಲಹೆಯನ್ನು ಪಡೆದು ಖಂಡಿತವಾಗಿಯೂ ಮಾಡಿಕೊಡಬೇಕೆಂದು ಮಾನ್ಯ ಮಂತ್ರಿಯವರಲ್ಲಿ ವಿನಂತಿಸಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರು ಹೇಳುವಂತಹ ವಿಷಯಗಳನ್ನು ಗಮನದಲ್ಲಿಟ್ಟುಕೊಂಡು ೪೨ ಟಿಎಂಸಿ ನೀರಿನಲ್ಲಿ ಮೈನರ್ ಇರಿಗೇಷನ್‌ಗೆ ೩೨ ಟಿಎಂಸಿ ನೀರನ್ನು ವಿೂಸಲಿಡಲಾಗಿದೆ, ಉಳಿದ ೯ ಟಿ.ಎಂ.ಸಿ. ನೀರನ್ನು ವಿೂಡಿಯಂ ಇರಿಗೇಷನ್‌ಗೆ ಮತ್ತು ವೇಜರ್ ಇರಿಗೇಷನ್‌ಗೆ ಇಡಲಾಗಿದೆ. ೩೨ ಟಿಎಂಸಿ ನೀರನ್ನು ಸಂಪೂರ್ಣವಾಗಿ ಬಳಕೆ ಆಗದಿದ್ದರೆ ಇದರ ಬಗ್ಗೆ ಆಲೋಚನೆ ಮಾಡುವ ಒಂದು ಸೂಚನೆಯು ಇದೆ. ಸುಮಾರು ೨೭೦ ಎಕರೆ ಅರಣ್ಯ ಪ್ರದೇಶ ಮುಳುಗಡೆಯಾಗಿರುತ್ತದೆ. ಜೊತೆಗೆ ಭಾರತ ಸರ್ಕಾರದ ಒಪ್ಪಿಗೆಯನ್ನು ಪಡೆಯಬೇಕಾಗುತ್ತದೆ. ಈ ಎಲ್ಲಾ ವಿಷಯವನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಪರಿಶೀಲನೆ ಮಾಡಲಾಗುವುದು.

ಶ್ರೀ ಆರ್. ರಾಮಯ್ಯ.—ಮಾನ್ಯ ಮಂತ್ರಿಯವರು ಸುಮಾರು ೨೭೦ ಎಕರೆ ಪ್ರದೇಶ ಮುಳುಗಡೆ ಆಗುತ್ತದೆಂದು ಹೇಳಿದರು, ಆ ಭಾಗದಲ್ಲಿ ೧೩ ಸಾವಿರ ಎಕರೆಯಲ್ಲಿ ಕೆಂಗು ಬೆಳೆ ಇದೆ. ಆದ್ದರಿಂದ ಮುಳುಗಡೆ ಆಗತಕ್ಕ ಪ್ರದೇಶದ ಸಾಧಕ ಭಾಧಕಗಳನ್ನು ನೋಡಿ ಈ ಜಲಾಶಯದ ಬಡಾವಣೆಯನ್ನು ಮಾಡಿಕೊಡಬೇಕೆಂದು ತಮ್ಮ ಮೂಲಕ ಒತ್ತಾಯ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಈ ವಿಷಯವನ್ನು ಸರ್ಕಾರ ಮುಂಗಿಸಿಲ್ಲ. ಇದರ ಬಗ್ಗೆ ಮರು ಆಲೋಚನೆ ಮಾಡಲಾಗುವುದು.

(ಉತ್ತರದ ಪ್ರತಿ ಸಿಗಲಿಲ್ಲ)

೧೦ ವರ್ಷಗಳಿಂದ ಹೆಚ್ಚು ಶಿಕ್ಷೆ ಅನುಭವಿಸಿರುವ ಖೈದಿಗಳನ್ನು ಬಿಡುಗಡೆ ಮಾಡುವುದು

೨೩೮. ಶ್ರೀ ಪಂಪಾಪತಿ (ದಾವಣಗೆರೆ).—ಮಾನ್ಯ ಸಣ್ಣ ಉಳಿತಾಯ ಹಾಗೂ ಬಂಧೀಖಾನೆ ರಾಜ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

(ಅ) ರಾಜ್ಯದ ಬಂದೀಖಾನೆಗಳಲ್ಲಿ ೧೦ ವರ್ಷಗಳಿಗಿಂತ ಹೆಚ್ಚು ಶಿಕ್ಷೆ ಅನುಭವಿಸುತ್ತಿರುವವರ ಸಂಖ್ಯೆ ಎಷ್ಟು,

(ಅ) ೧೦ ವರ್ಷಗಳ ಅವಧಿಯಲ್ಲಿ ಖೈದಿಗಳು ಸುಧಾರಣೆ ಹೊಂದಿರುವರೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

(ಇ) ಹಾಗಿದ್ದಲ್ಲಿ, ೧೦ ವರ್ಷಗಳಿಂತ ಹೆಚ್ಚು ಶಿಕ್ಷೆ ಅನುಭವಿಸಿರುವವರನ್ನು ಬಿಡುಗಡೆ ಮಾಡಲು ಸರ್ಕಾರದವರು ಕ್ರಮಕೈಗೊಳ್ಳುವರೇ ?

(ಈ) ಹಾಗಿಲ್ಲದಿದ್ದಲ್ಲಿ ಬಿಡುಗಡೆ ಮಾಡುವುದರಿಂದ ಆಗುವ ತೊಂದರೆಗಳೇನು ?

ಶ್ರೀ ವೀರಣ್ಣ (ಬಂದೀಖಾನೆ ಮತ್ತು ಸಣ್ಣ ಉಳಿತ ಾ ಸಚಿವರು).—

(ಅ) ೮೩.

(ಆ) ಬಂದಿದೆ.

(ಇ) ಈಗಾಗಲೇ ಕ್ರಮ ಕೈಗೊಂಡಿದೆ.

(ಈ) ಉದ್ಭವಿಸುವುದಿಲ್ಲ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆ ೮೩ ಖೈದಿಗಳ ಪೈಕಿ ೨೩ ಖೈದಿಗಳನ್ನು ಬಿಡುಗಡೆ ಮಾಡುವುದಕ್ಕೆ ಆಜ್ಞೆ ಹೊರಡಿಸಲಾಗಿದೆ. ೬ ಜನ ಖೈದಿಗಳ ಸೂಚನೆ ಸರ್ಕಾರಕ್ಕೆ ಬಂದಿದೆ. ೨೮ ಜ ಖೈದಿಗಳ ಬಿಡುಗಡೆಯ ಸೂಚನೆ ಐಜಿಪಿ ಅವರ ಆಫೀಸಿನಲ್ಲಿ ಇದೆ. ೧೨ ಖೈದಿಗಳ ವಿಚಾರದಲ್ಲಿ ಸೂಪರಿಂಡೆಂಟ್ ಆಫ್ ಜೆಲ್ಸ್‌ರವರ ವಂಶೂಲಕ ಆಜ್ಞೆ ತಯಾರಿಸಲಾಗಿದೆ. ೧೧ ಜನ ಖೈದಿಗಳ ವಿಚಾರದಲ್ಲಿ, ವರದಿಗೋಸ್ಕರ ಸದಿಹಾ ಮಂಡಳಿಯ ಮುಂದೆ ಇದೆ. ಅಲ್ಲಿಂದ ವರದಿಗಳು ಬಂದ ತಕ್ಷಣ ಅವರವರ ಕೇಸ್ ಮೆರಿಟ್ ಪ್ರಕಾರ ಖೈದಿಗಳ ಬಿಡುಗಡೆಯ ಬಗ್ಗೆ ಕ್ರಮವನ್ನು ತೆಗೆದುಕೊಳ್ಳಲಾಗುವುದು.

ಶ್ರೀ ಪಂಪಾಪತಿ.—ಅವರು ೨೪ ಖೈದಿಗಳ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಕೆಲವು ಹಂತದಲ್ಲಿವೆಯೆಂದು ಹೇಳಿದ್ದಾರೆ. ೧೦ ವರ್ಷಗಳ ಮೇಲ್ಪಟ್ಟು ಇರುವ ೮೩ ಜನ ಖೈದಿಗಳನ್ನು ಆಗಸ್ಟ್ ೧೫ರಂದು ಬಿಡುಗಡೆ ಮಾಡತಕ್ಕ ಕ್ರಮವನ್ನು ತೆಗೆದುಕೊಳ್ಳುತ್ತಾರೆ. ೧೦ ವರ್ಷಗಳಿಗೂ ಮೇಲ್ಪಟ್ಟು ಜೈಲಿನಲ್ಲಿರತಕ್ಕ ಖೈದಿಗಳು ಜನತೆಯ ಸಂಪರ್ಕವನ್ನು ಕಡಿದುಕೊಂಡಿದ್ದಾರೆ. ಈವತ್ತು ಅವರು ಸಮಾಜದಲ್ಲಿ ಗೌರವವಾಗಿ ಜೀವನ ಮಾಡುವುದಕ್ಕೆ ತಾವು ಅವರಿಗೆ ಏನು ವ್ಯವಸ್ಥೆಯನ್ನು ಮಾಡಿದ್ದೀರಿ ಎನ್ನುವುದನ್ನು ತಿಳಿಸಬೇಕು.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೇ, ಮಾನವೀಯತೆಯ ದೃಷ್ಟಿಯಿಂದ ಯಾರು ಒಂದು ಮರಣದ ಶಿಕ್ಷೆಗೆ ಗುರಿಯಾಗಿ ಶಿಕ್ಷೆಯನ್ನು ಅನುಭವಿಸುತ್ತಿದ್ದಾರೆ. ಅವರು ಯಾವುದೋ ಸಂದರ್ಭಕ್ಕೆ ಸಿಕ್ಕಿ ಆ ಒಂದು ಕೃತ್ಯ ಎಸಗಿರುತ್ತಾರೆ. ಅವರ ಜೀವನದಲ್ಲಿ ಮಾರ್ಪಾಡು ಆಗಬೇಕು. ಜೈಲಿನಿಂದ ಹೊರಗಡೆ ಬಂದಾಗ ಅವರು ಗೌರವಸ್ಥಿತ ವ್ಯಕ್ತಿಗಳಾಗಿ ಬಾಳಬೇಕು, ಅವರಿಗೆ ಗೌರವವನ್ನು ಕೊಡಬೇಕು, ಆ ರೀತಿಯಾಗಿ ಮಾರ್ಪಾಡು ಆಗತಕ್ಕಂತಹ ಒಂದು ವ್ಯವಸ್ಥೆಯನ್ನು ನಮ್ಮ ಬಂದೀಖಾನೆಗಳಲ್ಲಿ ಕೊಡಲಾಗುತ್ತದೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಕೋರಮಂಗಲದಲ್ಲಿ ಒಂದು ಬಯಲು ಬಂದೀಖಾನೆ ಇದೆ. ಅದರಲ್ಲಿ ಯಾರು ಜೀವಾವಧಿ ಶಿಕ್ಷೆ ಅನುಭವಿಸುತ್ತಾರೋ, ಅವರ ನಡೆ, ಗುಣಗಳ ಆಧಾರದ ಮೇಲೆ ಯಾವುದೇ ನಿರ್ಬಂಧ ಇಲ್ಲದ ರೀತಿಯಲ್ಲಿ ಬಯಲು ಬಂದೀಖಾನೆಯಲ್ಲಿ ಕೆಲಸ ಮಾಡುವಂತಹ ಅವಕಾಶ ಇದೆ ನಿರ್ಬಂದ ಇಲ್ಲಾ.

ಅವರವರ ವೃತ್ತಿಗನುಗುಣವಾಗಿ ಜೈಲಿನಲ್ಲಿ ಅವರಿಗೆ ಟ್ರೈನಿಂಗ್ ಕೊಡತಕ್ಕ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಸ್ಟಿನ್ನಿಂಗ್ ಸ್ಮಿತ್ ಕೆಲಸ ಮತ್ತು ಪ್ರಿಂಟಿಂಗ್‌ಪ್ರೆಸ್ ಈ ರೀತಿಯ ಅನೇಕ ತರ ಬೇತಿಗಳನ್ನು ವೃತ್ತಿಗನುಗುಣವಾಗಿ ಕೊಟ್ಟು ಅವರು ಜೈಲಿನಿಂದ ಹೊರಗಡೆ ಬಂದಮೇಲೆ ಅವರು ಸಮಾಜದಲ್ಲಿ ಬೇರೆಯಲ್ಲ, ಸಮಾಜಕ್ಕ ಹೊಂದಿಕೊಂಡು ಗೌರವಾನ್ವಿತವಾಗಿ ಬಾಳಬೇಕೆಂದು ಲೋನ್ ಕಂ ಗ್ರಾಂಟ್ ರೂಪದಲ್ಲಿ ಹಣವನ್ನು ಕೊಡುತ್ತಿದ್ದೇವೆ. ಅವರು ಜೈಲಿನಿಂದ ಹೊರಗಡೆ ಬಂದ ಮೇಲೆ ಆ ವೃತ್ತಿಯನ್ನು ಪ್ರಾರಂಭ ಮಾಡಿಕೊಂಡು ಗೌರವಾಗಿ ಬಾಳಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಪಂಪಾಪತಿ.—ಮಾನ್ಯ ಮಂತ್ರಿಗಳವರು ಖೈದಿಗಳು ಜೈಲಿನಿಂದ ಹೊರಗಡೆ ಬಂದ ಮೇಲೆ ಅನೇಕ ಸವಲತ್ತುಗಳನ್ನು ಕೊಡತಕ್ಕ ವಿಷಯವನ್ನು ಹೇಳಿದ್ದಾರೆ. ಅವರಿಗೆ ವೃತ್ತಿಗನುಗುಣವಾಗಿ

ಹಣವನ್ನು ಸಹಾಯ ಮಾಡತಕ್ಕ ವ್ಯವಸ್ಥೆ ಇದೆಯೆಂದು ಹೇಳಿದ್ದಾರೆ. ಅವರಿಗೆ ಎಷ್ಟು ಹಣವನ್ನು ಕೊಡುತ್ತೀರಿ ? ಅವರಿಗೆ ಕನಿಷ್ಟ ಪಕ್ಷ ೨೫ ಸಾವಿರ ರೂಪಾಯಿಗಳನ್ನು ವೃತ್ತಿ ಪ್ರಾರಂಭ ಮಾಡಲು ಕೊಡಬೇಕು. ವೃತ್ತಿಯನ್ನು ಅವಲಂಬಿಸಿ ಅವರು ಜೀವನ ಸಾಗಿಸಬೇಕಾದರೆ ತಾವು ವ್ಯವಸ್ಥೆಯನ್ನು ಮಾಡಬೇಕು. ೨೫ ಸಾವಿರ ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು. ೧೦ವರ್ಷ ಶಿಕ್ಷೆಯಾದವರಿಗೆ ತಕ್ಷಣ ಬಿಡುಗಡೆ ಮಾಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಶ್ರೀ ವೀರಣ್ಣ.— ಮಾನ್ಯ ಸದಸ್ಯರು ಹೇಳತಕ್ಕ ವಿಷಯದ ಬಗ್ಗೆ ಅನೇಕ ಅರ್ಜಿಗಳು ಬರುತ್ತಿವೆ. ಒಂದು ಸಂಸಾರದಲ್ಲಿ ಒಬ್ಬನೇ ದುಡಿಯತಕ್ಕ ವ್ಯಕ್ತಿ ಇದ್ದು ಅವನು ಜೈಲು ಶಿಕ್ಷೆಗೆ ಒಳಪಟ್ಟಿದ್ದರೆ ಅವರನ್ನು ಬಿಡುಗಡೆ ಮಾಡಬೇಕೆಂದು ಅನೇಕ ಜನರು ಬೇಡಿಕೆಯನ್ನು ಸಲ್ಲಿಸಿದ್ದಾರೆ. ನಾವು ಅದರ ಬಗ್ಗೆ ಯೋಚನೆ ಮಾಡಿದ್ದೇವೆ. ಯಾರ್ಯಾರು ಸಂಸಾರದಲ್ಲಿ ಕಷ್ಟವನ್ನು ಅನುಭವಿಸುತ್ತಿದ್ದಾರೆ ಅಂತಹ ಸಂಸಾರಗಳ ಮಾಹಿತಿಯನ್ನು ತರಿಸಿಕೊಂಡು ಸರ್ಕಾರದಿಂದ ಐ. ಆರ್. ಡಿ. ಪಿ. ಲೋನ್ ಐ. ಎಸ್. ಪಿ. ಲೋನ್ ಕೊಡಬೇಕು ಮತ್ತು Their applications should be considered on priority basis and loans should be advanced for their families who are in distress ಎಂದು ತಿಳಿಸಿದ್ದೇನೆ. ಅವರಿಗೆ ಆಧ್ಯತೆಯ ಮೇಲೆ ಸಾಲ ಕೊಡತಕ್ಕದ್ದು ಸರ್ಕಾರದ ಆಲೋಚನೆಯಲ್ಲಿದೆ. ಮಾಹಿತಿಯನ್ನು ತರಿಸಿಕೊಂಡು ಅವರಿಗೆ ಸಹಾಯ ಸೌಲಭ್ಯವನ್ನು ಒದಗಿಸಿಕೊಡತಕ್ಕ ಯೋಚನೆ ಸರ್ಕಾರಕ್ಕೆ ಇದೆ. ಈಗ ರಿಹ್ಯಾಬಿಲಿಟೇಷನ್ ಸೌಕರ್ಯ ಒದಗಿಸಿ ಕೊಟ್ಟಿದ್ದೇವೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ೨೫ ಸಾವಿರ ರೂಪಾಯಿಗಳನ್ನು ಕೊಡಲಿಕ್ಕೆ ಅವಕಾಶವಿಲ್ಲ. ಈಗ ಒಂದೆರಡು ಸಾವಿರ ರೂಪಾಯಿಗಳ ವರೆಗೆ ಸಹಾಯ ಮಾಡತಕ್ಕ ಅವಕಾಶವಿದೆ. ಅದು ಬಹಳ ಕಡಿಮೆ ಆಗಬಹುದು. ಮಾಹಿತಿಯನ್ನು ತರಿಸಿಕೊಂಡು ಐ. ಆರ್. ಡಿ. ಪಿ ಮತ್ತು ಐ. ಎಸ್. ಪಿ. ಯಲ್ಲಿ ೧೫ ಸಾವಿರ, ೧೦ ಸಾವಿರ, ೫ ಸಾವಿರ ಸಾಲವನ್ನು ಒದಗಿಸಿ ಕೊಡುವ ಉದ್ದೇಶ ಸರ್ಕಾರಕ್ಕೆ ಇದೆ.

ಶ್ರೀ ಪಂಪಾಪತಿ.—ಸ್ವಂತ ಉದ್ಯೋಗ ಯೋಜನೆಯಲ್ಲಿ ೨೫ ಸಾವಿರ ರೂಪಾಯಿಗಳವರೆಗೂ ಕೊಡಲಾಗುತ್ತಿದೆ. ಜೈಲಿನಲ್ಲಿ ಎರಡು ಹೊತ್ತು ಊಟ ಹಾಕಿ ಎರಡು ರೂಪಾಯಿಗಳನ್ನು ಕೊಡತಕ್ಕ ವ್ಯವಸ್ಥೆ ಇದೆ. ಖೈದಿಗಳು ಕೆಲಸ ಮಾಡಿಕೊಂಡು ಸರ್ಕಾರಕ್ಕೆ ಸಹಾಯವಾಗಿದ್ದಾರೆ. ಅವರು ಬಿಡುಗಡೆಯಾಗಿ ಹೊರಗಡೆ ಬರತಕ್ಕ ಕಾಲದಲ್ಲಿ ಅವರಿಗೆ ೨೫ ಸಾವಿರ ರೂಪಾಯಿ ಕೊಡತಕ್ಕ ವ್ಯವಸ್ಥೆಯನ್ನು ತಾವು ಮಾಡಬೇಕು.

ಶ್ರೀ ವೀರಣ್ಣ.—ಖೈದಿಗಳು ಜೈಲಿನಲ್ಲಿ ವೃತ್ತಿಯನ್ನು ಮಾಡುತ್ತಿದ್ದಾರೆ. ಅವರಿಗೆ ದಿನಕ್ಕೆ ಎರಡೂವರೆ ರೂಪಾಯಿ ದಿನಗೂಲಿಯನ್ನು ಕೊಡುತ್ತೇವೆ. ಅವರು ಬಿಡುಗಡೆಯಾಗುವುದರೊಳಗೆ ಹಿಡಿಗಂಟು ಐದಾರು ಸಾವಿರ ರೂಪಾಯಿಗಳು ಆಗುತ್ತವೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಎಷ್ಟು ಹಣವನ್ನು ಕೊಡಲಿಕ್ಕೆ ಸಾಧ್ಯ ಎನ್ನುವುದನ್ನು ನೋಡಿ ಅಷ್ಟನ್ನು ಕೊಡಲಿಕ್ಕೆ ಪ್ರಯತ್ನ ಮಾಡುತ್ತೇನೆ.

ಕಂಗನ ಕೋಟೆ ಕೆರೆಯ ನಿರ್ಮಾಣ.

೩೦೭. ಶ್ರೀ ಬಸವರಾಜ ಪಾಟೀಲ (ಹುಮನಾಬಾದ್).—ಈ ಕೆಳಕಂಡ ಪ್ರಶ್ನೆಗಳಿಗೆ ಮಾನ್ಯ ಶ್ರೀ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ತಾಲ್ಲೂಕಿನಲ್ಲಿ ಕಂಗನಕೋಟೆ ಎಂಬ ಕೆರೆಯಿದ್ದು ಅದನ್ನು ನೀರಾವರಿ ಸಲುವಾಗಿ ಉಪಯೋಗಿಸಬೇಕೆಂಬುದು ಸರಕಾರದವರ ಉದ್ದೇಶವಿದೆಯೇ ?

ಆ) ಹಾಗಿದ್ದಲ್ಲಿ ಅದನ್ನು ಎಂದಿನಿಂದ ಕಾರ್ಯಗತಗೊಳಿಸಲಾಗುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಕಂಗನಕೋಟೆ ಎಂಬ ಹೆಸರಿನ ಕೆರೆಯಾವುದು ಇಲ್ಲ. ಕಂಗನಕೋಟೆಯ ಬಳಿ ಒಂದು ಹೊಸ ಕೆರೆಯ ನಿರ್ಮಾಣದ ಸಲಹೆಯನ್ನು ವಿಶ್ವ ಬ್ಯಾಂಕ್ ಸಹಾಯದ ಕಾರ್ಯಕ್ರಮದಲ್ಲಿ ಪರಿಶೀಲಿಸಲಾಗಿದ್ದು ಅದು ತಾಂತ್ರಿಕವಾಗಿ ಮತ್ತು ಆರ್ಥಿಕವಾಗಿ ಅಸೂಕ್ತವೆಂದು ತಿಳಿದು ಬಂದಿದೆ.